ನಮ್ಮಮ್ಮಾ ಶಾರದೆ ಉಮಾ ಮಹೇಶ್ವರೀ
ನಿಮ್ಮೊಳಗಿಹನಾರಮ್ಮಾ ॥ ಪ ॥

ಕಮ್ಮಗೋಲನ ವೈರಿ ಸುತನಾದ ಸೊಂಡಿಲ
ಹೆಮ್ಮೆಯ ಗಣನಾಥನೇ ॥ ಅ ॥

ಮೋರೆ ಕಪ್ಪಿನ ಭಾವ ಮೊರದಗಲದ ಕಿವಿ
ಕೋರೆದಾಡೆಯನಾರಮ್ಮಾ
ಮೂರುಕಣ್ಣನ ಸುತ
ಮುರಿದಿಟ್ಟ ಚಂದ್ರನ
ಧೀರ ತಾ ಗಣನಾಥನೇ ॥ ೧ ॥

ಉಟ್ಟ ಪಚ್ಚೆಯ ಬಿಗಿದುಟ್ಟ ಚೆಲ್ಲಣದ
ದಿಟ್ಟ ತಾನಿವನಾರಮ್ಮಾ
ಪಟ್ಟದ ರಾಣಿ ಪಾರ್ವತಿಯ ಕುಮಾರನು
ಹೊಟ್ಟೆಯ ಗಣನಾಥನೇ ॥ ೨ ॥

ರಾಶಿ ವಿದ್ಯೆಯ ಬಲ್ಲ
ರಮಣೀ ಹಂಬಲನೊಲ್ಲ
ಭಾಷಿಗನಿವನಾರಮ್ಮಾ
ಲೇಸಾಗಿ ಸುಜನರ ಸಲಹುವ
ನೆಲೆಯಾದಿಕೇಶವ ದಾಸ ಕಣೇ ॥ ೩ ॥